# ಕರ್ನಾಟಕ ಪರೀಕ್ಷಾ ಪ್ರಾಧಿಕಾರ
# Karnataka Examinations Authority

ಸಂಖ್ಯೆ: ಇಡಿ/ಕೆಇಎ/ಆಡಳಿತ/ಸಿ.ಆರ್.07/2023 ದಿನಾಂಕ: 13-09-2023

**ಪ್ರಕಟಣೆ**

**ಯುಜಿನೀಟ್-2023 – ವೈದ್ಯಕೀಯ ಕೋರ್ಸಿನ MOP-UP ROUND ಪ್ರವೇಶ**

**ಸೂಚನೆಗಳು**

1. ವೈದ್ಯಕೀಯ ಪ್ರವೇಶಕ್ಕಾಗಿ Mop-up ಸುತ್ತಿನ ಸೀಟು ಹಂಚಿಕೆಯನ್ನು ಆನ್‌ಲೈನ್ ಮೂಲಕ ಈ ಕೆಳಗಿನ ವೇಳಾಪಟ್ಟಿಯಂತೆ ನಡೆಸಲಾಗುವುದು.
2. ಕೆಇಎ ಮೂಲಕ ಯುಜಿನೀಟ್ 2023ರ ಮೊದಲನೇ ಸುತ್ತಿನಲ್ಲಿ (Choice 1 & 2) ಅಥವಾ ಎರಡನೇ ಸುತ್ತಿನಲ್ಲಿ ವೈದ್ಯಕೀಯ ಸೀಟು ಹಂಚಿಕೆಯಾದವರು ಯುಜಿನೀಟ್ 2023ರ **MOP-UP ROUND** ಸುತ್ತಿನಲ್ಲಿ ಭಾಗವಹಿಸಲು ಅರ್ಹರಾಗುವುದಿಲ್ಲ.
3. ಮೊದಲನೇ ಸುತ್ತಿನಲ್ಲಿ Choice-3 ನೀಡಿ ಎರಡನೇ ಸುತ್ತಿನಲ್ಲಿ ವೈದ್ಯಕೀಯ ಸೀಟು ಹಂಚಿಕೆಯಾದವರು ಯುಜಿನೀಟ್ 2023ರ **MOP-UP ROUND** ಸುತ್ತಿನಲ್ಲಿ ಭಾಗವಹಿಸಲು ಅರ್ಹರಾಗುವುದಿಲ್ಲ.
4. ಕೆಇಎ ಮುಖಾಂತರ ಯುಜಿನೀಟ್ 2023ರ ದಂತವೈದ್ಯಕೀಯ ಸೀಟು ಹಂಚಿಕೆಯಾದವರು ವೈದ್ಯಕೀಯ ಸೀಟು ಹಂಚಿಕೆಗಾಗಿ ಮಾತ್ರ ಭಾಗವಹಿಸಬಹುದು ಆದರೆ ದಂತವೈದ್ಯಕೀಯ ಸೀಟುಗಳನ್ನು ಆಯ್ಕೆ ಮಾಡಿಕೊಳ್ಳಲು ಅರ್ಹರಾಗುವುದಿಲ್ಲ.
5. ಅಖಿಲ ಭಾರತ ಕೋಟದಲ್ಲಿ / ಡೀಮ್ಡ್ ವಿಶ್ವವಿದ್ಯಾಲಯ / ಅಥವಾ ಯಾವುದೇ ಸಂಸ್ಥೆ / ಬೋರ್ಡ್‌ಗಳಿಂದ ಮೊದಲನೇ ಅಥವಾ ಎರಡನೇ ಸುತ್ತಿನಲ್ಲಿ ಯಾವುದೇ ಸೀಟುಗಳಿಗೆ ಹಂಚಿಕೆ ಪಡೆದು ಕಾಲೇಜಿನಲ್ಲಿ ಪ್ರವೇಶ ಪಡೆದಿದ್ದಲ್ಲಿ ಅಥವಾ ಅಖಿಲ ಭಾರತ ಕೋಟದಲ್ಲಿ / ಡೀಮ್ಡ್ ವಿಶ್ವವಿದ್ಯಾಲಯ / ಅಥವಾ ಯಾವುದೇ ಸಂಸ್ಥೆ / ಬೋರ್ಡ್‌ಗಳಿಂದ ಮಾಪ್ ಅಪ್ ಸುತ್ತಿನಲ್ಲಿ ಸೀಟು ಹಂಚಿಕೆಯಾಗಿದ್ದಲ್ಲಿ ಯುಜಿನೀಟ್ 2023ರ **MOP-UP ROUND** ಸುತ್ತಿನಲ್ಲಿ ಭಾಗವಹಿಸಲು ಅರ್ಹರಾಗುವುದಿಲ್ಲ.

**CAUTION DEPOSIT**

a. ಯುಜಿನೀಟ್ 2023ರ **MOP-UP ROUND** ಸುತ್ತಿನಲ್ಲಿ ಭಾಗವಹಿಸಲು ಆಸಕ್ತಿ ಇರುವ ಅರ್ಹ ಅಭ್ಯರ್ಥಿಗಳು ರೂ.1,00,000/- (ಒಂದು ಲಕ್ಷ ರೂಪಾಯಿ) ಗಳನ್ನು **CAUTION DEPOSIT** ಪಾವತಿಸಬೇಕು. ಎಲ್ಲಾ ವರ್ಗದ ಅಭ್ಯರ್ಥಿಗಳೂ ಸಹ **CAUTION DEPOSIT** ಅನ್ನು ಪಾವತಿಸಬೇಕು.

b. **MOP-UP ROUND** ಸುತ್ತಿನಲ್ಲಿ ವೈದ್ಯಕೀಯ ಸೀಟು ಹಂಚಿಕೆಯಾದಲ್ಲಿ ಅಭ್ಯರ್ಥಿಯು ಪಾವತಿಸುವ **CAUTION DEPOSIT** ಅನ್ನು ಹೊಂದಾಣಿಕೆ ಮಾಡಿಕೊಳ್ಳಲಾಗುವುದು.

c. **MOP-UP ROUND** ಸುತ್ತಿನಲ್ಲಿ ಸೀಟು ಹಂಚಿಕೆಯಾಗಿ ಅಭ್ಯರ್ಥಿಯು ಕಾಲೇಜಿಗೆ ಪ್ರವೇಶ ಪಡೆಯಲು ವಿಫಲನಾದಲ್ಲಿ, ಅಭ್ಯರ್ಥಿಯು ಪಾವತಿಸಿದ್ದ **CAUTION DEPOSIT** ಅನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

d. ಇತರೆ ಕೋರ್ಸುಗಳಿಗೆ ಪಾವತಿಸಿರುವ ಮೊತ್ತವನ್ನು **CAUTION DEPOSIT** ಎಂದು ಪರಿಗಣಿಸುವುದಿಲ್ಲ.

**OPTION ENTRY**

a. **CAUTION DEPOSIT** ಅನ್ನು ಪಾವತಿಸುವ ಎಲ್ಲಾ ಅಭ್ಯರ್ಥಿಗಳನ್ನು **OPTIONS** ಗಳನ್ನು ದಾಖಲಿಸಲು ಅನುವು ಮಾಡಿಕೊಡಲಾಗುವುದು.

b. ಎಲ್ಲಾ ಅಭ್ಯರ್ಥಿಗಳು ಹೊಸದಾಗಿ **OPTIONS** ಗಳನ್ನು ದಾಖಲಿಸಬೇಕು. ಈ ಮೊದಲು ದಾಖಲಿಸಿದ್ದ **OPTIONS** ಗಳನ್ನು ಪರಿಗಣಿಸುವುದಿಲ್ಲ.

ಕಾರ್ಯನಿರ್ವಾಹಕ ನಿರ್ದೇಶಕರು

**18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012**
18th Cross, Sampige Road, Malleshwaram, Bengaluru - 560 012.
Phone: 080 - 23 564 583, 23 460 460, 23 361 786, Fax: 080 - 23 461 576
e-mail : keauthority-ka@nic.in Website : http://kea.kar.nic.in